ದಿನಾಂಕ 27.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ.ಎಸ್.ಜೆ ರವರಿಂದಃ-**

ದಾವಾ ಬಿ ಅನುಸೂಚಿಯ ಸ್ವತ್ತುಗಳ ಸ್ವಾಧೀನ ನಮ್ಮ ಬಳಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ. 218 ರ ಸ್ವತ್ತಿನ ಪೈಕಿ 4 ಎಕರೆ 6 ಸೆಂಟ್ಸ್ ನಮ್ಮ ಸ್ವಾಧೀನದಲ್ಲಿ ಇದ್ದು, ಉಳಿದ ಜಮೀನು ಮತ್ತು ಸರ್ವೆ ನಂ. 280/1 ಖರೀದಿದಾರರ ಸ್ವಾಧೀನದಲ್ಲಿ ಇದೆ ಎಂದು ಉತ್ತರಿಸಿರುತ್ತಾರೆ. ದಾವಾಸ್ವತ್ತುಗಳಲ್ಲಿ ವಾದಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಜಿ ಪಿ ರವರಿಂದಃ**

ನಿ.ಪಿ-10 ದಾಖಲೆಗೆ ವಾದಿಯು ಒಪ್ಪಿಗೆ ಸಾಕ್ಷಿದಾರಳಾಗಿ ಸಹಿ ಮಾಡಿರುತ್ತಾರೆ. ನಿ.ಪಿ-10 ರಲ್ಲಿ ನಮೂದಿಸಿರುವ ಸ್ವತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಾದಿಯ ಗಂಡ ಮಧ್ಯವರ್ತಿಯಾಗಿ ಭಾಗವಹಿಸಿದ್ದರು ಎಂದರೆ ಸರಿ. ನಿ.ಪಿ-10 ರ ಕ್ರಯಪತ್ರವನ್ನು ಬರೆದುಕೊಟ್ಟ ಸಂದರ್ಭದಲ್ಲಿ ನನ್ನ ತಂದೆ ವಾದಿಗೆ ಹಣವನ್ನು ನೀಡಿದ್ದರು. 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ವಾದಿಯೊಂದಿಗೆ ಶರೀಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.